(ಇಂದು ದಿನಾಂಕ 24-07-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಪಿ ಟಿ ವಕೀಲರಿಂದಃ**

ಆರೋಪಿ ನಮ್ಮ ಊರಿನವರು. ನಾನು ಮತ್ತು ಆರೋಪಿ ಫ್ಯಾಕ್ಟರಿ ನಡೆಸುವ ಸಲುವಾಗಿ ಪಾಲುದಾರಿಕೆ ಪತ್ರವನ್ನು ಮಾಡಿಕೊಂಡಿದ್ದೆವು. ವಾಟರ್ ಪ್ಲಾಂಟ್ ಹಾಕುವ ಸಲುವಾಗಿ ನಾನು ಮತ್ತು ಆರೋಪಿ ಪಾಲುದಾರಿಕೆ ಪತ್ರ ಮಾಡಿಕೊಂಡಿದ್ದೆವು . ನಾನು ರೂ. 37,50,000/- ಹೂಡಿಕೆ ಮಾಡಿದ್ದು ಆರೋಪಿ ರೂ. 15,00,000/-ಹೂಡಿಕೆ ಮಾಡಿದ್ದರು. ಬ್ಯಾಂಕಿನಿಂದ ರೂ. 80,00,000/-ಸಾಲವನ್ನು ಎಸ್ ಎಸ್ ಬ್ರಿವಿಜೆಸ್ ಪಾರ್ಟನರ್ ಶಿಪ್ ಹೆಸರಿನಲ್ಲಿ ತೆಗೆದುಕೊಂಡಿದ್ದೆವು . ಸದರಿ ಪಾಲುದಾರಿಕೆ ಪ್ರಾರಂಭಿಸಿದ ಜಾಗ ಆರೋಪಿಗೆ ಸೇರಿದ್ದಾಗಿತ್ತು. ರೂ. 37,50,000/- ಬಿಟ್ಟರೆ ಬೇರೆ ಯಾವುದೇ ಹೂಡಿಕೆ ಮಾಡಿರಲಿಲ್ಲ ಎಂದರೆ ಸರಿ . ಇನ್ನುಳಿದ ಹಣ ಹೂಡಿಕೆ ಮಾಡಿದ್ದು ಆರೋಪಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ . ಪ್ಲಾಂಟ್ ಪ್ರಾರಂಭಿಸಿದ ನಂತರ ಮೂರು ತಿಂಗಳು ವ್ಯವಹಾರ ಮಾಡಿದ್ದೇವೆ . ಮೂರು ತಿಂಗಳಲ್ಲಿ ಬಂದಂತಹ ಆದಾಯವನ್ನು ಇಬ್ಬರು ಹಂಚಿಕೊಂಡಿಲ್ಲ , ಸಾಕ್ಷಿ ಮುಂದುವರೆದು ಬಂದಂತಹ ಉತ್ಪನ್ನವನ್ನು ಅವರೇ ತೆಗೆದುಕೊಂಡಿದ್ದಾರೆ . ಮೂರು ತಿಂಗಳಿನಲ್ಲಿ ಮಾಡಿದಂತಹ ವ್ಯವಹಾರದ ಬಗ್ಗೆ ನನ್ನ ಹತ್ತಿರ ದಾಖಲಾತಿಗಳು ಇವೆ ಎಂದರೆ ಸರಿಯಲ್ಲ. ನನಗೆ ಎಷ್ಟು ಲಾಭ ಮತ್ತು ಎಷ್ಟು ನಷ್ಟ ಆಗಿದೆ ಎಂದು ಗೊತ್ತಿದೆ. ಆ ಸಮಯದಲ್ಲಿ ನಾನು ಕಚೇರಿಗೆ ಹೋಗುತ್ತಿದ್ದೆ. ಪ್ಲಾಂಟ್ ಪ್ರಾರಂಭಿಸಿದ ನಂತರ ಎಷ್ಟು ವ್ಯವಹಾರ ನಡೆದಿತ್ತು ಎಂದು ನಾನು ಆ ಸಮಯದಲ್ಲಿ ಕಚೇರಿಯಲ್ಲಿ ಇದ್ದುದರಿಂದ ಗೊತ್ತಿದೆ . ಬಾಯಿ ಮಾತಿನ ಹೇಳಿಕೆ ಬಿಟ್ಟರೆ ದಾಖಲಾತಿಗಳು ಇಲ್ಲ ಎಂದರೆ ಸರಿ , ಸಾಕ್ಷಿ ಮುಂದುವರೆದು ಕಚೇರಿಯಲ್ಲಿ ಇದೆ ಎಂದು ಹೇಳುತ್ತಾರೆ . ನನ್ನ ಮತ್ತು ಆರೋಪಿಯ ನಡುವೆ ಮನಸ್ತಾಪ ಬಂದ ನಂತರ ಆರ್ಬಿಟ್ರೇಶನ್‌ಗೆ ನಾವು ಹೋಗಿಲ್ಲ. ಸಾಕ್ಷಿ ಮುಂದುವರೆದು ಅವರ ಕುಟುಂಬದವರ ಸಮಕ್ಷಮದಲ್ಲಿ ಚರ್ಚೆ ಆಗಿದೆ ಎಂದು ಹೇಳುತ್ತಾರೆ . ಆ ಸಮಯದಲ್ಲಿ ಆರೋಪಿ ,

ಆರೋಪಿಯ ತಂದೆ , ಆರೋಪಿಯ ಭಾವ ಮತ್ತು ನಾನು ಇದ್ದರು . ಸದರಿ ಚರ್ಚೆ ನಡೆದ ಸಮಯದಲ್ಲಿ ದಾಖಲಾತಿ ಮಾಡಿಕೊಂಡಿದ್ದೇವೆ . ಆರೋಪಿ ಹಣ ಕೊಡುತ್ತೇನೆ ಎಂದು ಹೇಳಿದ್ದರಿಂದ ಒಪ್ಪಂದ ಪತ್ರ ಮಾಡಿಕೊಂಡಿದ್ದೇವೆ . ದಿನಾಂಕ 01-02-2021 ರಂದು ನಾನು ಮತ್ತು ಆರೋಪಿ ಒಪ್ಪಂದ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿ . ಸದರ ಒಪ್ಪಂದ ಪತ್ರವನ್ನು ಹಾಜರು ಪಡಿಸಿದ್ದೇನೆ. ಸದರಿ ಒಪ್ಪಂದ ಪತ್ರದಲ್ಲಿ ತಲಾ 10 ಲಕ್ಷದಂತೆ ಮೂರು ಚೆಕ್‌ಗಳನ್ನು ಕೊಡಬೇಕೆಂದು ಬರೆಯಲಾಗಿತ್ತು ಎಂದರೆ ಸರಿ . ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ರಾಂಚ್ ಕಾರವಾರಗೆ ಸೇರಿದ ಚೆಕ್ ನಂ. 462572, 462573, 462574 ಗಳನ್ನು ತಲಾ 10 ಲಕ್ಷ ರೂಪಾಯಿಗಳಿಗೆ ಕೊಡಲಾಗಿದೆ ಎಂದು ನಮೂದಾಗಿದೆ ಎಂದರೆ ಸರಿ . ಸದರಿ ಚೆಕ್‌ಗಳನ್ನು ದಿನಾಂಕ 31-12-2021, ದಿನಾಂಕ 31-12-2022 ಮತ್ತು ದಿನಾಂಕ 31-12-2023 ರಂದು ಕೊಡಬೇಕು ಎಂದು ಕರಾರು ಆಗಿತ್ತು ಎಂದರೆ ಸರಿ. ಸದರಿ ಮೂರು ಚೆಕ್‌ಗಳನ್ನು ಕರಾರು ಪತ್ರ ಆದ ದಿನ ನನಗೆ ಕೊಟ್ಟಿದ್ದರು ಎಂದರೆ ಸರಿ . ನಿಪಿ-1 ರೂ. 11,80,000/- ಕ್ಕೆ ಇದೆ ಎಂದರೆ ಸರಿ . ಕರಾರು ಪತ್ರದಲ್ಲಿ ಬರೆದಂತಹ ಮೊತ್ತಕ್ಕೂ ಮತ್ತು ಚೆಕ್ ನಲ್ಲಿರುವ ಮೊತ್ತಕ್ಕೂ ವ್ಯತ್ಯಾಸ ಇದೆ ಎಂದರೆ ಸರಿ , ಸಾಕ್ಷಿ ಮುಂದುವರೆದು ಆರೋಪಿ ಪ್ರತಿ ತಿಂಗಳು ರೂ. 1,00,000/- ಹಣ ಕೊಡುತ್ತೇನೆ ಎಂದು ಹೇಳಿದ್ದರು , ಆದರೆ ಕೊಟ್ಟಿಲ್ಲ, ಆ ರೀತಿ ಚೆಕ್ ನಲ್ಲಿ ಹಣವನ್ನು ನಮೂದಿಸಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆರೋಪಿ ರೂ. 1,00,000/- ಹಣ ಕೊಡುತ್ತೇನೆ ಎಂದು ಹೇಳಿದ್ದಾ ಎಂದು ಹೇಳುತ್ತಾರೆ . ಚೆಕ್‌ನಲ್ಲಿ ಬರೆದಂತಹ ರೂ. 11,80,000/-ನಾನೇ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೊತ್ತವನ್ನು ಒಂದು ವರ್ಷ ಆದ ನಂತರ ಚೆಕ್ ನಲ್ಲಿ ಆರೋಪಿ ಬರೆದುಕೊಟ್ಟಿದ್ದಾರೆ . ಚೆಕ್ ನಲ್ಲಿ ಬರೆದಂತಹ ಮೊತ್ತ ಮತ್ತು ತಾರೀಖನ್ನು ನಾನೇ ಬರೆದಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02-02-2024 ರಂದು ರೂ. 11,80,000/- ಆರೋಪಿ ಚೆಕ್ ನ್ನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ದಿನಾಂಕ 01-02-2021 ರಂದು ಕರಾರು ಪತ್ರ ಆಗುವ ಸಮಯದಲ್ಲಿ ರೂ. 10,00,000/- ಆರೋಪಿ ಕೊಟ್ಟಿದ್ದರು ಎಂದರೆ ಸಾಕ್ಷಿ ಹಣವನ್ನು ನಮೂದಿಸಿ

ಕೊಟ್ಟಿರಲಿಲ್ಲ ಎಂದು ಹೇಳುತ್ತಾರೆ. ಸದರಿ ಮೂರು ಚೆಕ್ ಗಳನ್ನು ಆರೋಪಿ ಕೇವಲ ಸಹಿ ಮಾಡಿ ಕೊಟ್ಟಿದ್ದರು. ನನಗೆ ಅನುಕೂಲವಾಗುವಂತೆ ನಾನು ಹಣ ಮತ್ತು ದಿನಾಂಕ ನಮೂದಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕೇವಲ ರೂ. 10,00,000/-ಕೊಡಲು ಮಾತ್ರ ಭಾಧ್ಯಸ್ಥರು ಎಂದರೆ ಸರಿಯಲ್ಲ. ರೂ. 11,80,000/- ಕಾನುನಾನುಬದ್ಧವಾಗಿ ಕೊಡಬೇಕಾದ ಹಣ ಅಲ್ಲ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ಸದರಿ ಸಮಯದಲ್ಲಿ ಆರೋಪಪಿ ನಾನು ಹೇಳಿದಂತಹ ಚೆಕ್ ನ್ನು ನೀಡಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಹಣ ಬರಲಿ ಎಂದು ಚೆಕ್ ನಲ್ಲಿ ಹೆಚ್ಚಿನ ಮೊತ್ತವನ್ನು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ